ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ,
ಯಳಂದೂರು.

**CC** 174/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಿಸಾರ್ ಅಹಮದ್ ಪಿ.ಕೆ | ಪ್ರಮಾಣ ಮಾಡಿದ ದಿನಾಂಕ 20.02.2024 |
| ತಂದೆಯ ಹೆಸರು | : | ಲೇಟ್ ಚಿಕ್ಕ ಕಾಸಿಂ ಸಾಬ್ | |
| ವಯಸ್ಸು | : | 44 ವರ್ಷ | |
| ವೃತ್ತಿ | : | ವಲಯ ಅರಣ್ಯ ಅಧಿಕಾರಿ | **Complainant Witness**/3 |
| ವಾಸಸ್ಥಳ | : | ಪುಣಜನೂರು | **PW**/3 |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು ದಿನಾಂಕ 16.11.2007 ರಿಂದ 19.12.2012 ರ ವರೆಗೆ ಉಪ ವಲಯ ಅರಣ್ಯ ಅಧಿಕಾರಿಯಾಗಿ ಯಳಂದೂರಿನಲ್ಲಿ ಕೆಲಸವನ್ನು ನಿರ್ವಹಿಸಿದ್ದೆ.

ದಿನಾಂಕ 04.10.2012 ರಂದು ನಾನು, ಸಾಕ್ಷಿ ನಂ.1,2, 4 ಮತ್ತು 5 ರವರು ಕೃಷ್ಣಯ್ಯನಕಟ್ಟೆ ಡ್ಯಾಂ ಬಳಿ ಗಸ್ತು ಮಾಡುತ್ತಿದ್ದಾಗ ಬೆಳಗಿನ ಜಾವ 4 ಗಂಟೆಗೆ ಯಾರೋ ವ್ಯಕ್ತಿಗಳು ಟಾರ್ಚ್ ಬೆಳಕಿನ ಸಹಾಯದಿಂದ ಓಡಾಡುತ್ತಿರುವುದು ಕಂಡು ಬಂದಿರುತ್ತದೆ. ನಾವು 5 ಜನರು ಸೇರಿ ತಲಕಾಮನಗುಡ್ಡದ ಹತ್ತಿರ ಅವರುಗಳನ್ನು ಸುತ್ತುವರಿಯುತ್ತೇವೆ. ಕತ್ತಲು ಇದ್ದ ಕಾರಣದಿಂದ ನಮಗೆ ಎಲ್ಲರನ್ನು ಹಿಡಿಯಲು ಆಗಿರುವುದಿಲ್ಲ ಕೇವಲ ನಾಗಶೆಟ್ಟಿ ಎಂಬುವವನು ಒಬ್ಬನು ಸಿಕ್ಕಿಹಾಕಿಕೊಳ್ಳುತ್ತಾನೆ. ನಾವು ಅವನನ್ನು ಹಿಡಿದು ವಿಚಾರಿಸಿದಾಗ ಅವನ ಜೊತೆ ಇದ್ದ 3 ಜನ ಹೆಸರುಗಳನ್ನು ತಿಳಿಸಿರುತ್ತಾನೆ, ಅವರುಗಳ ಹೆಸರು ಪುಟ್ಟಸ್ವಾಮಿ, ಸೋಮಣ್ಣ ಮತ್ತು ಶಿವಹಟ್ಟಿ ಎಂದು ನಮಗೆ ನಾಗಶೆಟ್ಟಿಯು ತಿಳಿಸಿರುತ್ತಾನೆ. ನಾಗಶೆಟ್ಟಿಯ ಬಳಿ ತಲೆಯಲ್ಲಿ ಒಂದು ಟಾರ್ಚ್, ಒಂದು ನಾಡಬಂದೂಕು, 1 ಬ್ಯಾಟರಿ, ಒಂದು ಮಚ್ಚು ಮತ್ತು ಒಂದು ಗೋಣಿಚೀಲ ಹಾಗೂ ಮತ್ತೊಂದು ಪಾಸ್ಟಿಕ್ ಚೀಲ ಸಿಕ್ಕಿರುತ್ತದೆ. ಪೊದೆಯಲ್ಲಿ ನಾಗಶೆಟ್ಟಿಯು ಒಂದು **TVS** ಬೈಕನ್ನು ನಿಲ್ಲಿಸಿದ್ದನು ಇಷ್ಟು ವಸ್ತುಗಳನ್ನು ನಾವು ಜಪ್ತು ಪಡಿಸಿಕೊಂಡಿರುತ್ತೇವೆ. ಯಾವ ಕಾರಣಕ್ಕಾಗಿ ಇಲ್ಲಿಗೆ ಬಂದಿರುತ್ತೀರಿ ಎಂದು ನಾವು ವಿಚಾರಿಸಿದಾಗ ಅವನು ಕಾಡು ಪ್ರಾಣಿಗಳ ಮಾಂಸದ ಸಲುವಾಗಿ ಕಾಡು ಪ್ರಾಣಿಗಳನ್ನು ಭೇಟಿಯಾಡಲು ಬಂದಿರುವುದಾಗಿ ನಮಗೆ ತಿಳಿಸಿರುತ್ತಾನೆ. ಆರೋಪಿತರು ಮೇಲ್ನೋಟಕ್ಕೆ ಅಪರಾಧವನ್ನು ಎಸಗಿರುವುದು ಕಂಡು ಬಂದ

ಕಾರಣ ನಾವು ನಾಗಶೆಟ್ಟಿಯನ್ನು **RFO** ಕಛೇರಿ ಯಳಂದೂರಿಗೆ ಕರೆದುಕೊಂಡು ಬಂದಿರುತ್ತೇವೆ. ನಾವು ಮಹಜರ್ ನ್ನು ಬೆಳಗಿನ ಜಾವ 4–30 ರಿಂದ 6 ಗಂಟೆಯ ವರೆಗೆ ಜರುಗಿಸಿ ಮೇಲೆ ಕಾಣಿಸಿದ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುತ್ತೇವೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ಮುದ್ದೇಮಾಲುಃ–1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಸ್ಥಳ ಮಹಜರನ ದೃಢೀಕೃತ ನಕಲನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಂ.–2 ರವರು ಸಾಕ್ಷಿ ನಂ.–1 ರವರ ಉಕ್ತಲೇಖನದಂತೆ ನಿಪಿ–1 ನ್ನು ಬರೆದಿರುತ್ತಾರೆ.

(**Since this is an evidence recorded before framing of charge as per Section** 244 **of Cr.PC, there cannot be any cross examination at this stage**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

20.02.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.